ದಿ. 27.10.2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ : ಶ್ರೀ ಜಿ.ಪಿ. ವಕೀಲರಿಂದ ಅರ್ಜಿದಾರರ ಪರವಾಗಿ :

10. ನಾನು ಹೋದ ಬಾರಿ ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಇರುವ ವಿಷಯಗಳು ನನಗೆ ಗೊತ್ತಿವೆ ಮತ್ತು ಸರಿ ಇವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ.

11. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಕೆಲವು ಜೆರಾಕ್ಸ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಆದ್ದರಿಂದ, ಅವುಗಳನ್ನು ನಿಶಾನೆ ಮಾಡಲು ಬರುವುದಿಲ್ಲ.

ಪಾಟೀಸವಾಲು : ಶ್ರೀ ಕೆ.ಎಂ. ವಕೀಲರಿಂದ 1 ನೇ ಎದುರುದಾರರ ಪರವಾಗಿ :

ಸಕಾರಣವಿಲ್ಲದೆ ಕಾಲಾವಕಾಶ ಕೋರಿರುತ್ತಾರೆ . ಆದ್ದರಿಂದ ತಿರಸ್ಕರಿಸಲಾಯಿತು.

ಇಲ್ಲ.

ಪಾಟೀಸವಾಲು : 2 ನೇ ಎದುರುದಾರರ ಪರ ವಕೀಲರು : ಗೈರು ಹಾಜರು.

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.

ದಿ.04.12.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ : ಶ್ರೀ ಎ.ಎ. ವಕೀಲರಿಂದ ಅರ್ಜಿದಾರರ ಪರವಾಗಿ :

12. ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿವೆ ಮತ್ತು ಸತ್ಯವಾಗಿವೆ. ಅದಕ್ಕೆ ಸಹಿ ಮಾಡಿರುತ್ತೇನೆ.

1.Service Certificate dated 02.11.2003 as Ex.P.1.

2.Copy of the Bill dated 01.03.2013 as Ex.P.2, Shift attendance as Ex.P.2(a).

3.Copy of the Bill dated 01.07.2013 as Ex.P.3, Shift attendance as Ex.P.3(a).

4.Copy of the Bill dated 01.08.2013 as Ex.P.4, Shift attendance as Ex.P.4(a).

5.Copy of the Bill dated 01.10.2013 as Ex.P.5, Shift attendance as Ex.P.5(a).

6.Copy of the Bill dated 01.12.2013 as Ex.P.6, Shift attendance as Ex.P.6(a), EPF documents as Ex.P.6(b).

7.Copy of the Bill dated 01.01.2014 (4 sheets) as Ex.P.7, Shift attendance as Ex.P.7(a), EPF documents as Ex.P.7(b).

8.Copy of the Bill dated 01.02.2014 as Ex.P.8, Shift attendance as Ex.P.8(a), EPF documents as Ex.P.8(b) and Ex.P.8(c).

9.Copy of the Bill dated 01.04.2014 as Ex.P.9, Shift attendance as Ex.P.9(a).

10.Copy of the Bill dated 04.03.2014 as Ex.P.10, Shift attendance as Ex.P.10(a).

11.Copy of the Bill dated 01.06.2014 as Ex.P.11, Shift attendance as Ex.P.11(a), EPF documents as Ex.P.11(b) and Ex.P.11(c).

12.Copy of the Bill dated 01.09.2014 as Ex.P.12, Shift attendance as Ex.P.12(a), Account statement as Ex.P.12(b) EPF as Ex.P.12(c), Challan as Ex.P.12(d), EPF documents as Ex.P.12(e) and Ex.P.12(f), Ex.P.12(g).

13.Copy of the Bill dated 01.10.2014 as Ex.P.13, Shift attendance as Ex.P.13(a), Account statement as Ex.P.13(b) EPF as Ex.P.13(c), Provident

fund statement as Ex.P.13(d).

14.Copy of the Bill dated 01.12.2014 as Ex.P.14, Shift attendance as Ex.P.14(a) EPF documents as Ex.P.14(b) and Ex.P.14(c).

15. Copy of the Bill dated 04.02.2016 as Ex.P.15, Shift attendance as Ex.P.15(a) bank vouchers as Ex.P.15(b) and Ex.P.15(c).

16. Copy of the Bill dated 05.03.2016 as Ex.P.16, Shift attendance as Ex.P.16(a) EPF document as Ex.P.16(b) voucher Ex.P.16(c), EPF as Ex.P.16(d).

17. Copy of the Bill dated 31.03.2016 as Ex.P.17, Shift attendance as Ex.P.17(a) bank voucher as Ex.P.17(b).

18. Copy of the Bill dated 06.06.2016 as Ex.P.18, Shift attendance as Ex.P.18(a) bank voucher as Ex.P.18(b).

19. Copy of the Bill dated 05.05.2016 as Ex.P.19, Shift attendance as Ex.P.19(a) bank vouchers as Ex.P.19(b) and Ex.P.19(c).

20. Copy of the Bill dated 05.07.2016 as Ex.P.20, Shift attendance as Ex.P.20(a) bank voucher as Ex.P.20(b) and EPF as Ex.P.20(c), Ex.P.20(d) and Ex.P.20(e).

21. Copy of the Bill dated 05.08.2016 as Ex.P.21, Copy of the 2nd Bill of same dated 05.08.2016 as Ex.P.21(a), Shift attendance as Ex.P.21(b) bank voucher as Ex.P.21(c) and Ex.P.21(d), Ex.P.21(e), Bank statement is Ex.P.21(f), EPF is Ex.P.21(g).

ಮುಂದುವರಿದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.

ದಿ.17.03.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ : ಶ್ರೀ ಎ.ಎ. ವಕೀಲರಿಂದ ಅರ್ಜಿದಾರರ ಪರವಾಗಿ :

13. ಈ ದಿನ ಈ ಕೆಳಕಂಡ ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಲಾಯಿತು.

22. Copy of the Bill dated 04.10.2016 is marked as Ex.P.22, shift attendance is marked Ex.P.22(a), bank voucher is marked as Ex.P.22(b), EPF is marked as Ex.P.22(c), ESI statement is marked as Ex.P.22(d).

23. Copy of the Bill dated 03.12.2016 is marked as Ex.P.23, shift attendance is marked Ex.P.23(a), bank voucher is marked as Ex.P.23(b), EPF statement is marked as Ex.P.23(c). ESI statement is marked as Ex.P.23(d),

24. Copy of Bill dated 02.01.2017 is marked as Ex.P.24, shift attendance is marked Ex.P.24(a), bank voucher is marked as Ex.P.24(b), ESI statement is marked as Ex.P.24(c).

25. Letter dated 06.10.2017 is given to Superintendant Engineer by the claimant is marked with subject to objection of Respondent's counsel (Because copy furnished to respondent has no signature of claimant) is marked as Ex.P.25.

26. Letter dated 05.12.2017 given to District Commissioner by CITU President is marked as Ex.P.26.

27. Letter dated 05.12.2017 given to Assistant Labour Commissioner by CITU President is marked as Ex.P.27 (marked with subject to objection of respondent's counsel ).

28. Letter dated 05.03.2018 given to KPTCL Superintendant Engineer by KSEWF Secretary is marked as Ex.P.28 (marked with subject to objection of respondent's counsel ).

29. Letter dated 19.03.2018 given to the Labour Officer by KSEWF Secretary is marked as Ex.P.29 (marked with subject to objection of respondent's counsel).

30. Letter dated 19.03.2018 given by the claimant to the Labour Officer is marked as Ex.P.30.

31. Letter dated 20.03.2018 (not signed by the claimant) given by the claimant to the AEMUSS, Thyavanagi is marked as Ex.P.31, (marked with subject to objection of respondent's counsel).

32. Letter dated 20.03.2018 given by the claimant to the Executive Engineer KPTCL is marked as Ex.P.32.

33. Work award dated 16.02.2018 from KPTCL is marked as Ex.P.33.

34. Letter dated 02.06.2018 given by KPTCL to AIUTUC is marked as Ex.P.34.

35. Application form of Manjunath Kaidale is marked as Ex.P.35.

36. Letter dated 03.07.2018 written to Executive Engineer, KPTCL from Manjunatha Kaidale is marked as Ex.P.36.

37. Application of Manjunatha S.C. is marked as Ex.P.37.

38. Other two applications of Manjunath Kaidale are marked as **Ex.P.38 and P.39.**

39. Letter dated 28.08.2018 given by Executive Engineer to Manjunatha Kaidale is marked as **Ex.P.40.**

40. Letter dated 31.08.2018 given by Additional D.C. to Assistant Labour Commissioner is marked as **Ex.P.41.**

41. Copy of Letter dated 03.09.2018 from Manjunatha Kaidale to Executive Engineer, T.L.S.S. Division is marked as **Ex.P.42.**

42. Letter dated 12.09.2018 from Deputy Secretary to Chief Minister is marked as **Ex.P.43.**

43. G-mail letter dated 10.10.2018 is marked as **Ex.P.44.**

44. Letter dated 30.10.2018 written by claimant to the Chief Minister is marked as **Ex.P.45.**

45. Endorsement dated 28.11.2018 given by Labour Office is marked as **Ex.P.46.**

46. Two applications form of claimant are marked as **Ex.P.47 and P.48.**

47. Letter dated 02.01.2019 from Executive Engineer KPTCL is marked as **Ex.P.49.**

48. Another letter dated 03.01.2019 from Executive Engineer KPTCL is marked as **Ex.P.50.**

49. Letter dated 10.01.2019 given to Labour Officer from Manjunatha Kaidale is marked as **Ex.P.51.**

50. Letter dated 23.01.2019 given by Executive Engineer KPTCL to Manjuantha Kaidale is marked as **Ex.P.52.**

<u>ಪಾಟೀಸವಾಲು ಃ ಎದುರುದಾರರ ಪರ</u>

ಶ್ರೀಮತಿ ಕೆ.ಬಿ.ಎಸ್. ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ, ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.

ದಿ.24.11.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

**ಪಾಟೀಸವಾಲು : 1 ಮತ್ತು 2 ನೇ ಎದುರುದಾರರ ಪರವಾಗಿ :**

ಪಾಟೀ ಸವಾಲು ಮಾಡಲು 1 ಮತ್ತು 2 ನೇ ಎದುರುದಾರರ ಪರ ವಕೀಲರು ಸಮಯ ಕೋರಿರುತ್ತಾರೆ. ಸಕಾರಣವಿಲ್ಲದ ಕಾರಣ, ಅವರ ಕೋರಿಕೆಯನ್ನು ತಿರಸ್ಕರಿಸಿ, ಅವರ ಪರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.

ದಿ.16.03.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

**ಪಾಟೀಸವಾಲು : ಶ್ರೀಮತಿ ಕೆ.ಬಿ.ಎಸ್. ವಕೀಲರಿಂದ 1 ನೇ ಎದುರುದಾರರ ಪರವಾಗಿ :**

13. ನಾನು ಜೆ.ಓ.ಡಿ.ಸಿ. (Job Oriented Dimploma Course) ಓದಿದ್ದೇನೆ. ನಾನು ಇಲ್ಲಿಯವರೆಗೆ ಗುತ್ತಿಗೆದಾರರ ಅಧೀನದಲ್ಲಿ ಕೆಲಸ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಕೆ.ಪಿ.ಟಿ.ಸಿ.ಎಲ್. ತ್ಯಾವಣಗಿ ಸಬ್ ಸ್ಟೇಶನ್ ಅಧೀನದಲ್ಲಿ ಕೆಲಸ ಮಾಡಿದ್ದೇನೆ ಎಂದು ಹೇಳುತ್ತಾರೆ. ಕೆ.ಪಿ.ಟಿ.ಸಿ.ಎಲ್. ಅಧೀನದಲ್ಲಿ ಕೆಲಸ ಮಾಡಿದ್ದೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ನ್ಯಾಯಾಲಯದಲ್ಲಿ ಈ ಸಾಕ್ಷಿಯ ಪರ ಹಾಜರುಪಡಿಸಿರುವ ದಾಖಲೆಗಳನ್ನು ಸಾಕ್ಷಿಗೆ ತೋರಿಸಿ, ಸದರಿ ದಾಖಲೆಗಳಲ್ಲಿ ಯಾವ ದಾಖಲೆ ಕೆ.ಪಿ.ಟಿ.ಸಿ.ಎಲ್. ಅಧೀನದಲ್ಲಿ ಕೆಲಸ ಮಾಡಿದ್ದೇನೆಂದು ತೋರಿಸುತ್ತದೆ ಎಂದರೆ ಸಾಕ್ಷಿಯು ಅಂತಹ ದಾಖಲೆ ಇಲ್ಲ ಎಂದು ಹೇಳುತ್ತಾರೆ.

14. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲೆಗಳು ಅರುಣ್ ಇಲೆಕ್ಟ್ರಿಕಲ್ಸ್, ವಿಮಲ್ ಎಲೆಕ್ಟ್ರಿಕಲ್ಸ್, ಪ್ರಕಾಶ ಎಲೆಕ್ಟ್ರಿಕಲ್ಸ್ ಮತ್ತು ಎಸ್.ಆರ್. ಎಲೆಕ್ಟ್ರಿಕಲ್ಸ್ ಎಂದರೆ ಸರಿ. ಸದರಿ ಅರುಣ್ ಇಲೆಕ್ಟ್ರಿಕಲ್ಸ್, ವಿಮಲ್ ಎಲೆಕ್ಟ್ರಿಕಲ್ಸ್ , ಪ್ರಕಾಶ ಎಲೆಕ್ಟ್ರಿಕಲ್ಸ್ ಮತ್ತು ಎಸ್.ಆರ್. ಎಲೆಕ್ಟ್ರಿಕಲ್ಸ್ ಇವರುಗಳು

ಗುತ್ತಿಗೆದಾರರು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರುಗಳು ಇಲಾಖೆಯ ಗುತ್ತಿಗೆದಾರರು ಎಂದು ಸ್ವತಃ ನುಡಿದಿದ್ದಾರೆ. ಕೆ.ಪಿ.ಟಿ.ಸಿ.ಎಲ್.ಗೆ ಸಂಬಂದಪಟ್ಟಂತೆ ಯಾವುದೇ ಕೆಲಸ ತೆಗೆದುಕೊಂಡಲ್ಲಿ ಸದರಿ ಗುತ್ತಿಗೆದಾರರಿಗೂ ಮತ್ತು ಕೆ.ಪಿ.ಟಿ.ಸಿ.ಎಲ್. ನವರಿಗೂ ಒಪ್ಪಂದ ಆಗಿರುತ್ತದೆ ಎಂದರೆ ಸರಿ. ಸದರಿ ಒಪ್ಪಂದ ಸಾಮಾನ್ಯವಾಗಿ ಒಂದು ವರ್ಷದವರೆಗೂ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

3. ತ್ಯಾವಣಗಿಯಲ್ಲಿ ಕೆ.ಪಿ.ಟಿ.ಸಿ.ಎಲ್. ರವರದ್ದು 110 ಕೆ.ವಿ. ಮತ್ತು 66 ಕೆ.ವಿ. ಸಬ್ ಸ್ಟೇಶನ್ ಇದೆ ಎಂದರೆ ಸರಿ. ಸದರಿ ಸ್ಟೇಶನ್ ನನ್ನು 24 ಗಂಟೆಗಳ ಕಾಲವೂ ನಿರ್ವಹಣೆ ಮಾಡಲು ಗುತ್ತಿಗೆದಾರರಿಗೆ ಟೆಂಡರ್ ಮೂಲಕ ವಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2000-2001 ರಲ್ಲಿ ನಾನು ಅರುಣ್ ಎಲೆಕ್ಟ್ರಿಕಲ್ಸ್ ನ ಗುತ್ತಿಗೆದಾರರ ಅಧೀನದಲ್ಲಿ ಕೆಲಸ ಮಾಡುತ್ತಿದ್ದೆ. ಟೆಂಡರ್ ಅಗ್ರಿಮೆಂಟ್ ಕೆ.ಪಿ.ಟಿ.ಸಿ.ಎಲ್. ಮತ್ತು ಗುತ್ತಿಗೆದಾರರ ಮಧ್ಯೆ ಆಗಿರುತ್ತದೆ ಎಂದರೆ ಸರಿ. ಗುತ್ತಿಗೆದಾರರು ತಮಗೆ ವಹಿಸಿದ ಟೆಂಡರ್ ಕೆಲಸವನ್ನು ನಿರ್ವಹಿಸಲು ಯಾವ ಯಾವ ಕೆಲಸಗಾರರನ್ನು ಮತ್ತು ಎಷ್ಟು ಜನ ಕೆಲಸಗಾರರನ್ನು ನೇಮಕ ಮಾಡಿಕೊಂಡಿದ್ದಾರೆ ಎಂದು ಕೆ.ಪಿ.ಟಿ.ಸಿ.ಎಲ್. ನವರಿಗೆ ಮಾಹಿತಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

4. ಕೆ.ಪಿ.ಟಿ.ಸಿ.ಎಲ್.ನವರು ಒಬ್ಬ ನೌಕರನನ್ನು ಖಾಯಂ ಆಗಿ ನೇಮಕ ಮಾಡಿಕೊಂಡಲ್ಲಿ ಗುತ್ತಿಗೆದಾರನು ಒಬ್ಬ ಕೆಲಸಗಾರನನ್ನು ತೆಗೆಯಬೇಕು ಎಂಬ ನಿಬಂಧನೆ ಇದೆ ಎಂದರೆ ನನಗೆ ಗೊತ್ತಿಲ್ಲ. ಒಬ್ಬ ನೌಕರರನ್ನು ಖಾಯಂ ಆಗಿ ತೆಗೆದುಕೊಂಡ ನಂತರ ಗುತ್ತಿಗೆದಾರರು ಯಾವ ಕೆಲಸಗಾರರನ್ನು ತೆಗೆಯಬೇಕು ಎಂಬ ನಿರ್ಧಾರ ಗುತ್ತಿಗೆದಾರರಿಗೆ ಸಂಬಂಧಪಟ್ಟಿದ್ದು, ಅದು ಕೆ.ಪಿ.ಟಿ.ಸಿ.ಎಲ್. ನವರಿಗೆ ಗೊತ್ತಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕೆ.ಪಿ.ಟಿ.ಸಿ.ಎಲ್. ನವರಿಗೂ ಗುತ್ತಿಗೆದಾರರಿಗೂ ಟೆಂಡರ್ ಒಪ್ಪಂದ ವಿಚಾರ ನನಗೆ ತಿಳಿದಿದ್ದೂ ಸಹ ಏನೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಿಲ್ಲುಗಳು ಅರುಣ್ ಇಲೆಕ್ಟ್ರಿಕಲ್ಸ್, ವಿಮಲ್ ಎಲೆಕ್ಟ್ರಿಕಲ್ಸ್, ಪ್ರಕಾಶ ಎಲೆಕ್ಟ್ರಿಕಲ್ಸ್ ಮತ್ತು ಎಸ್.ಆರ್. ಎಲೆಕ್ಟ್ರಿಕಲ್ಸ್ ನವರು ನೀಡಿದ ಬಿಲ್ಲುಗಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ಬಿಲ್ಲುಗಳನ್ನು ಕೆ.ಪಿ.ಟಿ.ಸಿ.ಎಲ್. ನಿಂದ ಮಾಹಿತಿ ಹಕ್ಕು ಅಧಿನಿಯಮದ ಅಡಿ ಪಡೆದಿದ್ದೇನೆ ಎಂದು ಹೇಳುತ್ತಾರೆ. ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಸದರಿ ಬಿಲ್ಲುಗಳನ್ನು ಸಾಕ್ಷಿಗೆ ತೋರಿಸಿ, ಸದರಿ ಬಿಲ್ಲುಗಳು ಗುತ್ತಿಗೆದಾರರು ನೀಡಿದಂತಹ ಬಿಲ್ಲುಗಳು ಎಂದು ಸೂಚಿಸಲಾಗಿ, ಸಾಕ್ಷಿಯು

ಸರಿ ಎಂದು ಹೇಳುತ್ತಾರೆ.

6. ನಿಪಿ-1 ರ ಸರ್ಟಿಫಿಕೇಟ್ ನ್ನು ಅರುಣ್ ಎಲೆಕ್ಟ್ರಿಕಲ್ಸ್ ಗುತ್ತಿಗೆದಾರರು ಕೊಟ್ಟ ಸರ್ಟಿಫಿಕೇಟ್ ಆಗಿರುತ್ತದೆ ಎಂದರೆ ಸರಿ.

(ಈ ಹಂತದಲ್ಲಿ 1 ನೇ ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.

ದಿ.01.06.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

**ಮುಂದುವರಿದ ಪಾಟೀಸವಾಲು : ಶ್ರೀಮತಿ ಕೆ.ಬಿ.ಎಸ್. ವಕೀಲರಿಂದ 1 ನೇ ಎದುರುದಾರರ ಪರವಾಗಿ :**

7. 2 ನೇ ಎದುರುದಾರರ ಬಳಿ ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಹಾಜರೂ ಪಡಿಸಿಲ್ಲ. 2 ನೇ ಎದುರುದಾರರಿಗೆ ಕೆ.ಪಿ.ಟಿ.ಸಿ.ಎಲ್. ರವರಿಂದ 01.03.2018 ರಂದು ವರ್ಕ್ ಆಡರ್ರ್ ಮಂಜೂರಾಗಿತ್ತು. 01.03.2018 ರಿಂದ 28.02.2019 ರವರೆಗೆ ವರ್ಕ್ ಆರ್ಡರ್ ಇದೆ ಎಂದು Award ನಲ್ಲಿ ಇದ್ದು ಈ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. ನಿಪಿ.33 ರಲ್ಲಿ ಕಂಡಿಕೆ ನಂ.5 ರಲ್ಲಿ ಗುತ್ತಿಗೆದಾರರು ಕೆಲಸಗಾರರ ಗುರುತಿನ ಚೀಟಿಯನ್ನು ಕೆ.ಪಿ.ಟಿ.ಸಿ.ಎಲ್. ರವರಿಗೆ ಕೊಡಬೇಕು ಎಂದು ಇದೆ ಮಂದರೆ ಸರಿ. 2 ನೇ ಎದುರುದಾರರು ನನ್ನ ಗುರುತಿನ ಚೀಟಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಗುರುತಿನ ಚೀಟಿಯನ್ನು 2 ನೇ ಎದುರುದಾರರು ಪಡೆದಿದ್ದಾರೆ ಎಂದು ತೋರಿಸಲು ಯಾವುದೇ ಹಿಂಬರಹವನ್ನು ಹಾಜರು ಪಡಿಸಿಲ್ಲ.

8. 2 ನೇ ಎದುರುದಾರರು ನನಗೆ ಫೋನ್ ಮಾಡಿ ನನ್ನನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ತಿಳಿಸಿದರು. ಯಾವ ದಿನಾಂಕದಂದು ನನಗೆ ಫೋನ್ ಮಾಡಿ ತಿಳಿಸಿದರು ಎಂದರೆ ನನಗೆ ನೆನಪಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಹಾಜರಾತಿ ಪುಸ್ತಕ, Employee’s Provident Fund Register ದಾಖಲೆಗಳು, ಬಿಲ್ಲಗಳು ಇವುಗಳು ಪ್ರಕಾಶ್ ಇಲೆಕ್ಟ್ರಿಕಲ್ಸಿ ಮತ್ತು ಎಸ್. ಆರ್ ಇಲೆಕ್ಟ್ರಿಕಲ್ಸ್ ರವರದ್ದು ಎಂದರೆ

ಸರಿ. ಸಾಕ್ಷಿಯು ಮುಂದುವರೆದು ವಿಮಲ್ ಎಲೆಕ್ಟ್ರಿಕಲ್ಸ್ ರವರಿಗೆ ಸಂಬಂಧಿಸಿದ ದಾಖಲೆಗಳು ಸಹ ಇವೆ ಎಂದು ಹೇಳುತ್ತಾರೆ.

9. 2 ನೇ ಎದುರುದಾರರಿಗೆ ಸಂಬಂಧಿಸಿದ ಹಾಜರಾತಿ ಪುಸ್ತಕ, Employee's Provident Fund Register ದಾಖಲೆಗಳು, ಬಿಲ್ಲುಗಳು ಹಾಜರು ಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಾನು 2 ನೇ ಎದುರುದಾರರಲ್ಲಿ 20 ದಿನ ಕೆಲಸ ಮಾಡಿದ್ದು ಅವುಗಳ ಜೆರಾಕ್ಸ್ ಪ್ರತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಷಾನೆಗಳನ್ನಾಗಿ ಗುರುತಿಸಿಲ್ಲ ಎಂದು ಹೇಳುತ್ತಾರೆ.

10.ಅರುಣ್ ಇಲೆಕ್ಟ್ರಿಕಲ್ಸ್ ರವರಿಂದ ಸರ್ವಿಸ್ certificate ನಿಪಿ.1 ಮಾತ್ರ ಹಾಜರು ಪಡಿಸಿದ್ದೇನೆ ಎಂದರೆ ಸರಿ. ವಿಮಲ್ ಇಲೆಕ್ಟಿಕಲ್ಸ್, ಪ್ರಕಾಶ ಇಲೆಕ್ಟಿಕಲ್ಸ್, ಎಸ್.ಆರ್ ಇಲೆಕ್ಟ್ರಿಕಲ್ಸ್, ಅನು ಪವರ್ ಇಂಜಿನಿಯರ್ಸ್ (2 ನೇ ಎದರುದಾರರು) ಇವರಿಂದ ಸರ್ವಿಸ್ certificate ಹಾಜರು ಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ನನಗೆ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ನಿಪಿ.25 ರಿಂದ 28 ರ ದಾಖಲೆಗಳು ಹೊರಗುತ್ತಿಗೆ ಇಂದ ಪಡೆದ ಕೆಲಸಗಾರರ ಬೇಡಿಕೆಗಳ ಬಗ್ಗೆ ಬರೆದ ಪತ್ರಗಳು ಎಂದರೆ ಸರಿ. ಸದರಿ ಪತ್ರಗಳು ಆನಂದ್ ರಾಜು ರವರು ಬರೆದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಒಂದು ಪತ್ರವನ್ನು ಮಾತ್ರ ಆನಂದ್ ರಾಜುರವರು ಬರೆದಿದ್ದಾರೆ ಎಂದು ಹೇಳುತ್ತಾರೆ. ನಿಪಿ.30 ರಂತೆ ಲೇಬರ್ ಆಫೀಸರ್ ರವರಿಗೆ ನಾನು ಮನವಿ ಕೊಟ್ಟಿದ್ದೇನೆ ಎಂದರೆ ಸರಿ. ಸದರಿ ಪತ್ರದಲ್ಲಿ ನಾನು 2 ನೇ ಎದುರುದಾರರು ನನ್ನನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ ಎಂದು ಬರೆದಿದ್ದೇನೆ ಎಂದರೆ ಸರಿ. ಲೇಬರ್ ಆಫೀಸರ್ ಮುಂದೆ ಕೇಸ್ ನಡೆದು ಅಲ್ಲಿ ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದಾರೆ ಎಂದರೆ ಸರಿ. ಲೇಬರ್ ಆಫೀಸರ್ ನಿಪಿ.46 ರಂತೆ ಆದೇಶ ಮಾಡಿದ್ದಾರೆ ಎಂದರೆ ಸರಿ. ಲೇಬರ್ ಆಫೀಸರ್ ಮುಂದೆ ನಾನು 2 ನೇ ಎದುರುದಾರರ ಬಳಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ವಾದ್ದರಿಂದ ನನ್ನ ಅರ್ಜಿಯನ್ನು ವಜಾ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಇಲಾಖೆಯವರು ನನಗೆ ಯಾವುದೇ ದಾಖಲೆ ಕೊಟ್ಟಿಲ್ಲವಾದ್ದರಿಂದ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಲು ಆಗಿಲ್ಲ ಎಂದು ಹೇಳುತ್ತಾರೆ.

11. ನಾನು 2 ನೇ ಎದುರುದಾರರ ಬಳಿ ಕೆಲಸವನ್ನು ಮಾಡುತ್ತಿರಲ್ಲಿ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಾನು 2 ನೇ ಎದುರುದಾರರ ಬಳಿ ಕೆಲಸವನ್ನು ಮಾಡಿಲ್ಲದೆ ಇದ್ದ ಕಾರಣ 2 ನೇ ಎದುರುದಾರರು ನನ್ನನ್ನು ಕೆಲಸದಿಂದ ತೆಗೆಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರೆ

ಸರಿಯಲ್ಲ.

12. ನಾನು ಕೆ.ಪಿ.ಟಿ.ಸಿ.ಎಲ್ ರಲ್ಲಿ ನೇರವಾಗಿ ಕೆಲಸ ಮಾಡಿಲ್ಲ ಎಂದರೆ ಸರಿಯಲ್ಲ. ಕೆ.ಪಿ.ಟಿ.ಸಿ.ಎಲ್. ಮತ್ತು ಗುತ್ತಿಗೆದಾರರ ನಡುವೆ ಆಗಿರುವ agreement ಅನ್ನು ನಾನು ನೋಡಿಲ್ಲ. ಸದರಿ agreement, sham document ಎಂದು ನಾನು ಈ ಕೇಸಿಗೋಸ್ಕರ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದ ದಾಖಲೆಗಳನ್ನು ಸೃಷ್ಟಿಸಿಕೊಂಡು 1 ನೇ ಎದುರುದಾರರಿಗೆ ಕಿರುಕುಳ ಕೊಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.